ಸೆಲೆಬ್ರಿಟಿ ಮದರ್



## ಸುಷ್ಮಿತಾ ಸೇನ್

ಬಾಲಿವುಡ್ ನಟಿ, ವಿಶ್ವ ಸುಂದರಿಯಾಗಿದ್ದ ಸುಷ್ಮಿತಾ ಸೇನ್, ತಾಯ್ತನದ ಬಗ್ಗೆ ಇದ್ದ ಪೂರ್ವಗ್ರಹವನ್ನು ತೊಡೆದು ಹಾಕಿ ಇಬ್ಬರು ಹೆಣ್ಣುಮಕ್ಕಳನ್ನು ದತ್ತು ತೆಗೆದುಕೊಂಡವರು.

20ರ ಹರೆಯದಲ್ಲಿ, ಮದುವೆಯಾಗದೆ ಮಗುವನ್ನು ಸಾಕಲು ಆರಂಭಿಸಿದ ಅವರ ಮುಂದೆ ಸಮಾಜ ಇಟ್ಟ ಪ್ರಶ್ನೆಗಳು ನೂರಾರು. 2000ರಲ್ಲಿ ಹಾಗೂ 2010ರಲ್ಲಿ ಹೆಣ್ಣುಮಕ್ಕಳನ್ನು ದತ್ತು ತೆಗೆದುಕೊಂಡ ಅವರು ಉತ್ತಮ ಕೌಟುಂಬಿಕ ಜೀವನವನ್ನು ಅನುಭವಿಸುತ್ತಿದ್ದಾರೆ.

ತಮ್ಮ ನಿರ್ಧಾರದ ಕುರಿತು ಮಾತನಾಡಿದ್ದ ಅವರು, ‘ಸಮಾಜದ ನಿರೀಕ್ಷೆಗಳು ಹಾಗೂ ಪ್ರಶ್ನೆಗಳನ್ನು ಎದುರಿಸುವ ಸಂದರ್ಭ ಬಂದಾಗ ನನ್ನ ಹೃದಯದ ಮಾತನ್ನು ಕೇಳಿದೆ. ತಾಯಿಯಾಗಲು ನಿರ್ಧರಿಸಿದೆ. ನನ್ನ ಆಯ್ಕೆಗೆ ಬದ್ಧಳಾಗಿದ್ದೆ. ಕೆಲವರಿಗೆ ತಾಯಿಯಾಗಬೇಕು ಎನಿಸಿರುತ್ತದೆ. ಕೆಲವು ಮಕ್ಕಳಿಗೆ ತಾಯಿ ಬೇಕಿರುತ್ತದೆ. ಎರಡೂ ಸೇರಿದರೆ ಸರಳ’ ಎಂದಿದ್ದಾರೆ.

‘ಮಕ್ಕಳನ್ನು ಬೆಳೆಸುವುದು ತಾಯ್ತನದ ಬಹುಮುಖ್ಯ ಸಂಗತಿ. ಅದಕ್ಕೆ ನಾನು ನ್ಯಾಯಬದ್ಧವಾಗಿದ್ದೇನೆ’ ಎಂದು ಹೇಳಿದ್ದಾರೆ.



## ನೀನಾ ಗುಪ್ತಾ

ಪ್ರಸಿದ್ಧ ಕಿರುತೆರೆ ಹಾಗೂ ಬಾಲಿವುಡ್ ನಟಿ ನೀನಾ ಗುಪ್ತಾ ಸಮಾಜದ ಕಟ್ಟುಪಾಡುಗಳನ್ನು ಮೀರಿ ತಮ್ಮದೇ ಹಾದಿಯಲ್ಲಿ ಬದುಕು ಕಟ್ಟಿಕೊಂಡವರು.

1980ರಲ್ಲಿ ಕ್ರಿಕೆಟಿಗ ವಿವಿಯನ್ ರಿಚರ್ಡ್ ಜೊತೆ ಸಂಬಂಧ ಹೊಂದಿದ್ದ ಅವರು, ಹೆಣ್ಣು ಮಗುವಿಗೆ ಜನ್ಮ ಕೊಟ್ಟರು. ಮದುವೆಯಾಗದಿದ್ದರೂ ಮಗುವಿಗೆ ಜನ್ಮ ನೀಡಿದ್ದ ಅವರಿಗೆ ಸಹಜವಾಗಿಯೇ ಸಮಾಜದಲ್ಲಿ ಹಲವು ಪ್ರಶ್ನೆಗಳು ಎದುರಾಗಿದ್ದವು. ಆದರೆ ಇವೆಲ್ಲವನ್ನೂ ಎದುರಿಸಿದ ಅವರು, ಮಗಳನ್ನು ದಿಟ್ಟತನದಿಂದ ಸಾಕಿದರು.

ಏಕಾಂಗಿಯಾಗಿ ಮಗುವನ್ನು ಸಾಕುವುದರ ಕುರಿತು ಒಮ್ಮೆ ಮಾತನಾಡಿದ್ದ ಅವರು, ‘ಸಿಂಗಲ್ ಪೇರೆಂಟಿಂಗ್ ಎಂಬುದು ಒಂದಷ್ಟು ಸವಾಲುಗಳೊಂದಿಗೆ ಬರುತ್ತದೆ. ಆ ಸವಾಲುಗಳು ನನಗೆ ತಿಳಿದಿದ್ದವು. ನನ್ನ ಮಗಳನ್ನು ನೋಡಿಕೊಳ್ಳಲು ನನಗೆ ಶಕ್ತಿಯಿತ್ತು ಎಂಬುದನ್ನು ಸಾಬೀತುಪಡಿಸಿದೆ. ಒಬ್ಬಂಟಿಯಾಗಿದ್ದಾಗ ಎರಡು ಅಂಶಗಳನ್ನು ಬೇರೆಯವರಿಂದ ನಿರೀಕ್ಷಿಸಬಾರದು. ಒಂದು ಹಣವನ್ನು, ಮತ್ತೊಂದು ಭಾವನಾತ್ಮಕ ಬೆಂಬಲವನ್ನು’ ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟಿದ್ದರು.

ಭಾರತೀಯ ಸಮಾಜದಲ್ಲಿ ಮುಕ್ತವಾಗಿ ಒಪ್ಪಿಕೊಂಡಿಲ್ಲದಿದ್ದರೂ, ಸಾಹಸಿ ಮನೋಭಾವದ ತಾಯಂದಿರ ಕಥನಗಳು ನಮ್ಮ ಪುರಾಣಗಳಲ್ಲಿವೆ. ಇದಕ್ಕೆ ಅತ್ಯುತ್ತಮ ಉದಾಹರಣೆ, ಅವಿವಾಹಿತೆಯಾಗಿದ್ದ ಸಂದರ್ಭದಲ್ಲೇ ಮಂತ್ರಶಕ್ತಿಯಿಂದ ಮಗುವನ್ನು (ಕರ್ಣನನ್ನು) ಪಡೆದ ಕುಂತಿ. ಮದುವೆಯ ನಂತರವೂ ಪಾಂಡುವಿನಿಂದ ಸಂತಾನ ದೊರೆಯದೆ ಹೋದಾಗ ದೂರ್ವಾಸ ನೀಡಿದ ವರಪ್ರಭಾವದಿಂದ ಕುಂತಿ ಹಾಗೂ ಮಾದ್ರಿಯರು ಮಕ್ಕಳನ್ನು ಹೊಂದುತ್ತಾರೆ. ಪಾಂಡು ಹಾಗೂ ಮಾದ್ರಿಯರ ಅಕಾಲಿಕ ಮರಣದ ನಂತರ ಕುಂತಿ ತನ್ನ ಮಕ್ಕಳನ್ನು ದಿಟ್ಟತನದಿಂದ ಸಾಕಿ ಸಲಹುತ್ತಾಳೆ. ತಾಯಿಯ ಕಾಳಜಿಯಲ್ಲಿ ಬೆಳೆದ ಪಾಂಡವರು ಪ್ರಜೆಗಳ ಪ್ರೀತಿಗೆ ಪಾತ್ರರಾದರೆ, ತಂದೆ–ತಾಯಿಯ ಆಸರೆಯಲ್ಲಿ ಬೆಳೆದ ಕೌರವರು ಆಕ್ರಮಣಕಾರಿಗಳಾಗಿ ರೂಪುಗೊಳ್ಳುವ ವಿರೋಧಾಭಾಸವನ್ನು ‘ಮಹಾಭಾರತ’ ನಮ್ಮ ಮುಂದಿಡುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ‘ಸಿಂಗಲ್ ಮದರ್ ಪೇರೆಂಟಿಂಗ್’ ಪರಿಕಲ್ಪನೆ ಭಾರತದಲ್ಲಿ ನಿಧಾನವಾಗಿ ಜನಪ್ರಿಯಗೊಳ್ಳುತ್ತಿದೆ. ಸೆಂಟ್ರಲ್ ಅಡಾಪ್ಷನ್ ಅಥಾರಿಟಿ’ ಪ್ರಕಾರ 2017–18ರಲ್ಲಿ ಮಕ್ಕಳನ್ನು ದತ್ತು ಪಡೆಯಲು ಒಂಟಿ ಮಹಿಳೆಯರಿಂದ ಬಂದಿದ್ದ ಅರ್ಜಿಗಳ ಸಂಖ್ಯೆ 495. 2019ರಲ್ಲಿ ಆ ಸಂಖ್ಯೆ 589 ಏರಿಕೆಯಾಗಿದೆ ಹಾಗೂ ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿಯೇ ಸಾಗಿದೆ.

ದತ್ತು ಪಡೆಯಲು ಬಯಸುವ ಮಹಿಳೆಯರ ವಯಸ್ಸು ಕೂಡ ಗಮನಿಸಬೇಕಾದ ಸಂಗತಿ. 2017ರಿಂದಲೂ ದತ್ತು ಪಡೆಯಲು ಬಯಸುವ ಮಹಿಳೆಯರ ಸಂಖ್ಯೆ ಏರುಗತಿಯಲ್ಲಿಯೇ ಇದ್ದು, ಈ ಮುನ್ನ 40ರ ವಯೋಮಾನದ ಮೇಲ್ಪಟ್ಟವರು ದತ್ತು ಪಡೆಯಲು ಅರ್ಜಿ ಹಾಕುತ್ತಿದ್ದರೆ, ಈಗ 40 ವರ್ಷದ ಒಳಗಿನವರು ದತ್ತಕಕ್ಕೆ ಮುಂದಾಗುತ್ತಿರುವುದು ಸಾಮಾನ್ಯವಾಗಿದೆ.

### ಬದಲಾದ ಮಾತೃತ್ವದ ಪರಿಕಲ್ಪನೆ

ಬದಲಾದ ಕಾಲಘಟ್ಟದಲ್ಲಿ, ಆಧುನೀಕರಣ, ಜಾಗತೀಕರಣದ ನೆರಳಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಬಹುಮುಖ್ಯ ಅಂಶವಾಗಿದೆ.

ಸೆಲೆಬ್ರಿಟಿ ಮದರ್

## ಕಿಮ್ ಕರ್ದಶಿಯನ್



ರಿಯಾಲಿಟಿ ಟೀವಿ ಸ್ಟಾರ್, ಅಮೆರಿಕ ನಟಿ ಕಿಮ್ ಕರ್ದಶಿಯನ್ ನಾಲ್ವರು ಮಕ್ಕಳ ತಾಯಿ, ‘ಬಿಸಿನೆಸ್ ವುಮೆನ್’ ಆಗಿ ಬೆಳೆದ ಅವರು ಎರಡು ಮಕ್ಕಳನ್ನು ಹೆತ್ತು, ಎರಡು ಮಕ್ಕಳನ್ನು ಬಾಡಿಗೆ ತಾಯ್ತನದ ಮೂಲಕ ಪಡೆದುಕೊಂಡವರು.

ಎರಡನೇ ಹೆರಿಗೆ ನಂತರ ಮಕ್ಕಳನ್ನು ಪಡೆಯುವಂತಿಲ್ಲ ಎಂದು ವೈದ್ಯರು ಎಚ್ಚರಿಕೆ ನೀಡಿದ ಮೇಲೆ, ಬಾಡಿಗೆ ತಾಯ್ತನದ ಮೂಲಕ ಮತ್ತಿಬ್ಬರು ಮಕ್ಕಳನ್ನು ಪಡೆದರು. ವಿಚ್ಛೇದನದ ನಂತರ ಇಬ್ಬರು ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ತಾವೇ ನೋಡಿಕೊಳ್ಳುವ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಸ್ವೀಕರಿಸಿದ್ದರು.

ಸಂಬಂಧಗಳ ವಿವಾದಗಳಲ್ಲಿ ಸದಾ ಸಿಲುಕಿದ್ದ ಅವರು ಮಕ್ಕಳ ಪಾಲನೆಯ ಸವಾಲುಗಳ ಕುರಿತು ಒಮ್ಮೆ ಸುದ್ದಿವಾಹಿನಿಯೊಂದಿಗೆ ಮಾತನಾಡಿದ್ದರು.

‘ಪೇರೆಂಟಿಂಗ್ ಎನ್ನುವುದು ಅತಿ ದೊಡ್ಡ ಸವಾಲು. ಹಾಗೇ ಜೀವನದಲ್ಲಿ ಸಿಗುವ ಬಹು ಸಂತಸದ ಸಂಗತಿಯೂ ಹೌದು. ನಮ್ಮನ್ನು ನಾವು ಅರಿತುಕೊಳ್ಳುವುದನ್ನು ಕಲಿಸಿಕೊಡುತ್ತದೆ. ನಮ್ಮ ಬಗ್ಗೆ ನಮಗೇ ಗೊತ್ತಿಲ್ಲದ ಹಲವು ಸಂಗತಿಗಳನ್ನು ತಿಳಿಸುವುದು ತಾಯ್ತನವೇ’ ಎಂದು ಹೇಳಿದ್ದರು.